'ಏನು?'

'ಅದಕ್ಕಾಗಿಯೇ ನೀನು ಕೇಳಿರಲು ಸಾಧ್ಯವಿಲ್ಲವೆಂದು ನಾನು ಹೇಳಿದ್ದು. ಇನ್ನೂ ನಡೆದೇ ಇರದ ಅಪರಾಧದ ಬಗ್ಗೆ ನಾನು ತನಿಖೆ ನಡೆಸುತ್ತಿದ್ದೇನೆ.'

'ಪ್ವರೊ, ಅದು ಅರ್ಥವಿಲ್ಲದ ಮಾತು.'

'ಖಂಡಿತಾ ಅಲ್ಲ. ಕೊಲೆಯೊಂದು ನಡೆಯುವುದಕ್ಕೆ ಮುಂಚೆಯೇ ಯಾರಾದರೂ ತನಿಖೆ ಮಾಡುವುದಾದರೆ, ಅದು ಕೊಲೆಯ ಬಳಿಕ ವಿಚಾರಣೆ ನಡೆಸುವುದಕ್ಕಿಂತ ಉತ್ತಮ. ಒಬ್ಬ ವ್ಯಕ್ತಿಯೋ ಅಥವಾ ಸಣ್ಣ ಉಪಾಯವೋ ಆ ಕೊಲೆಯನ್ನು ತಡೆಯಲೂಬಹುದು.'

'ನೀನು ತಮಾಷೆ ಮಾಡುತ್ತಿಲ್ಲ ತಾನೆ, ಮಸ್ಯೂರ್ ಪ್ವರೊ?' ಹ್ಯಾರಿಸನ್ ಅವನ ಕಡೆ ದಿಟ್ಟಿಸಿ ನೋಡಿದ.

'ಇಲ್ಲ, ನಾನು ಗಂಭೀರವಾಗಿಯೇ ಹೇಳುತ್ತಿದ್ದೇನೆ.'

'ಒಂದು ಕೊಲೆಯಾಗುವುದೆಂದು ನಿಜವಾಗಲೂ ನೀನು ನಂಬುತ್ತೀಯಾ? ಹ್ಹಾ, ಅದು ಅಸಂಬದ್ಧ!'

'ಹೌದು ಮೊನೊಮಿ, ನಾನು ಹೇಳಿದ್ದರ ಅರ್ಥ ಅದೇ. ನಾವು ತಡೆಯದಿದ್ದರೆ ಕೊಲೆಯಾಗುವುದು ನಿಜ.' ಹ್ಯಾರಿಸನ್‌ಗೆ ಆದ ಆಶ್ಚರ್ಯವನ್ನು ಗಮನಕ್ಕೆ ತೆಗೆದುಕೊಳ್ಳದೇ ಪ್ವರೊ ಉತ್ತರಿಸಿದ.

'ನಾವು ತಡೆಯುವುದಾ?'

'ನಾವು ಎಂದು ಏಕೆ ಹೇಳಿದೆನೆಂದರೆ, ನನಗೆ ನಿನ್ನ ಸಹಕಾರ ಬೇಕಾಗಿರುವುದರಿಂದ.'

'ಅದಕ್ಕಾಗಿಯೇ ನೀನು ಇಲ್ಲಿಗೆ ಬಂದಿದ್ದಾ?'

ಪ್ವರೊ ಮತ್ತೆ ಅವನ ಕಡೆ ನೋಡಿದ. ಆ ಅವರ್ಣನೀಯ ನೋಟ ಹ್ಯಾರಿಸನ್‌ನನ್ನು ಕಸಿವಿಸಿಗೊಳಿಸಿತು.

**'ನಾನು ಮುಚ್ಚುಮರೆಯಿಲ್ಲದೆ ಈಗ ಹೇಳುತ್ತೇನೆ, ಕೇಳಿಸಿಕೊ. ಮಸ್ಯೂರ್ ಹ್ಯಾರಿಸನ್, ನಿನ್ನ ಮದುವೆ ನಿಶ್ಚಯವಾಗಿದೆ. ಮಿಸ್ ಮೊಲಿ ಡೀನಳ ಪರಿಚಯ ನನಗಿದೆ. ಅವಳು ತುಂಬಾ ಸುಂದರಿ. ಅವಳಿಗೆ ನಿನ್ನ ಜೊತೆ ನಿಶ್ಚಿತಾರ್ಥವಾಗುವುದಕ್ಕೆ ಮುಂಚೆ, ಅವಳು ಕ್ಲಾಡ್ ಲ್ಯಾಂಗ್ಟನ್‌ನನ್ನು ಪ್ರೀತಿಸಿದ್ದಳು. ಆದರೆ, ಅವನನ್ನು ಬಿಟ್ಟು ಅವಳು ನಿನ್ನನ್ನು ಇಷ್ಟಪಟ್ಟಳು.'**

'ಮಸ್ಯೂರ್ ಹ್ಯಾರಿಸನ್, ನಿನ್ನ ಮೇಲಿನ ಪ್ರೀತಿಯಿಂದ ನಾನಿಲ್ಲಿಗೆ ಬಂದೆ' ಎಂದ ಅವನು ನಂತರ ಸಂಪೂರ್ಣ ವಿಭಿನ್ನ ಧ್ವನಿಯಲ್ಲಿ ಮುಂದುವರಿಸಿದ, 'ಮಸ್ಯೂರ್ ಹ್ಯಾರಿಸನ್, ಅಲ್ಲಿ ಕಣಜದ ಗೂಡಿರುವುದು ಕಾಣಿಸುತ್ತಿದೆ. ನೀನು ಅದನ್ನು ನಾಶ ಮಾಡಬೇಕು.'

ಮಾತಿನ ವಿಷಯ ಬದಲಾದದ್ದು ನೋಡಿ, ಹ್ಯಾರಿಸನ್ ಗೊಂದಲದಲ್ಲಿ ಹುಬ್ಬುಗಂಟಿಕ್ಕಿದ. ಪ್ವರೊನ ನೋಟವನ್ನು ಅವನು ಹಿಂಬಾಲಿಸಿ, ತಬ್ಬಿಬ್ಬು ಧ್ವನಿಯಲ್ಲಿ ಹೇಳಿದ. 'ನಾನು ನಾಶ ಮಾಡುತ್ತೇನೆ. ನಿಜ ಹೇಳಬೇಕೆಂದರೆ ಲ್ಯಾಂಗ್ಟನ್ ಈ ಕೆಲಸವನ್ನು ಮಾಡುತ್ತೇನೆಂದು ಹೇಳಿದ್ದಾನೆ. ನಿನಗೆ ಕ್ಲಾಡ್ ಲ್ಯಾಂಗ್ಟನ್(Claude Langton) ನೆನಪಿದೆಯಾ? ನಾನು ನಿನ್ನನ್ನು ಭೇಟಿ ಮಾಡಿದ ಭೋಜನ ಕೂಟದಲ್ಲಿ ಅವನೂ ಇದ್ದ. ಅವನು ಈ ಗೂಡನ್ನು ನಾಶ ಮಾಡಲು ಈ ಸಾಯಂಕಾಲ ಬರುತ್ತಾನೆ. ಈ ಕೆಲಸದ ಮೇಲೆ ಅವನಿಗೆ ತುಂಬಾ ಒಲವಿದ್ದಂತಿದೆ.'